# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 703-2017** **ಸಿ. ಡಬ್ಲುಃ 09**

**ಪಿ. ಡಬ್ಲುಃ 08**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ /ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ನಂದೀಶ್ ಕುಮಾರ್ ಸಿ<br>ಚಾಮುಂಡಯ್ಯ<br>40 ವರ್ಷ<br>ಪಿ.ಎಸ್.ಐ ಯಳಂದೂರು ಪೊಲೀಸ್ ಠಾಣೆ<br>ಯಳಂದೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 20-03-2024** |

**ಮುಖ್ಯ ವಿಚಾರಣೆಃ  ಶ್ರೀ ಎಪಿಪಿ  ವಕೀಲರಿಂದಃ**

ನಾನು 14-03-2017 ರಿಂದ 19-04-2017 ರವರೆಗೆ ನಂಜಗೂಡು ಪಟ್ಟಣ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.04-04-2017 ರಂದು ಈಗಾಗಲೇ ದಾಖಲಾಗಿದ್ದ ಎನ್.ಸಿ.ಆರ್ 47/2017 ಕ್ಕೆ ಸಂಬಂಧಿಸಿದಂತೆ ಸದರಿ ಎನ್.ಸಿ.ಆರ್ ದೂರಿನಲ್ಲಿ ಇದ್ದ ಘಟಕಾಂಶಗಳು ಅಸಂಜ್ಞೆಯ ಸ್ವರೂಪದ ಅಂಶಗಳಾದ್ದರಿಂದ ಸದರಿ ದೂರಿಗೆ ಸಂಬಂಧಿಸಿದಂತೆ ಪ್ರಕರಣವನ್ನು ದಾಖಲಿಸಿ ತನಿಖೆ ಮುಂದುವರೆಸಲು ಅನುಮತಿ ಕೋರಿ, ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ದಿ.14/04/2017 ರಂದು ಸದರಿ ಪ್ರಕರಣದಲ್ಲಿ ಚಾಸಾ-8 ರವರು ಮಾಡಿರುವ ತನಿಖೆಯನ್ನು ಪರಿಶೀಲನೆ ಮಾಡಿ ತನಿಖೆಯನ್ನು ಮುಂದುವರೆಸಿ ಮಾಡಲಾದ ತನಿಖೆಯಿಂದ ಆರೋಪಿಗಳ ವಿರುದ್ಧ ಆರೋಪ ಸಾಭೀತಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಎಸ್.ಪಿ ವಕೀಲರಿಂದಃ**

ನೀವು ತನಿಖೆಯನ್ನು ಕೈಗೊಂಡ ನಂತರ ವಿಡಿಯೋ ಚಿತ್ರೀಕರಣ ಮತ್ತು ಭಾವ ಚಿತ್ರವನ್ನು ನೋಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಭಾವ ಚಿತ್ರವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಭಾವ ಚಿತ್ರದಲ್ಲಿ ವಾಹನ ಮತ್ತು ರೂ.20,00,000/- ಗಳ ಹಣವನ್ನು ನೋಡಿರುತ್ತೇನೆ ಹೊರತು ಹಣವನ್ನು ಜಪ್ತುಪಡಿಸಿಕೊಳ್ಳುವುದನ್ನು ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ಹಣವನ್ನು ಜಪ್ತುಪಡಿಸಿಕೊಂಡಿರುವುದರ ಬಾಬ್ತು ಮಹಜರಿನಲ್ಲಿ ನಮೂದು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತನಿಖೆಯ ಕಾಲದಲ್ಲಿ ಬುಲೆರೋ ವಾಹನವನ್ನು ನಂಜಗೂಡಿನ ಗ್ರಾಮಾಂತರ ಪೊಲೀಸ್ ಠಾಣೆಯ ಮುಂಭಾಗ ಅಮಾನತ್ತು ಪಡಿಸಿಕೊಳ್ಳಲಾಯಿತು ಎಂಬುದರ ಬಗ್ಗೆ ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ವಿಚಾರವನ್ನು ಮಹಜರಿನಲ್ಲಿಯೇ ನಮೂದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಮಹಜರ್ ನಲ್ಲಿ ಬುಲೆರೋ ವಾಹನವನ್ನು ನಂಜಗೂಡಿನ ಗ್ರಾಮಾಂತರ ಠಾಣೆಯ ಮುಂಭಾಗ ಹಿಡಿಯಲಾಗಿರುತ್ತದೆ ಎಂಬುದರ ಬಗ್ಗೆ ನಮೂದು ಇರುತ್ತದೆ. ಆರೋಪಿಗಳಿಂದ ಅಮಾನತ್ತು ಪಡಿಸಿಕೊಳ್ಳಲಾದ ಹಣದ ಬಾಬ್ತು ವಿವರಣೆಯನ್ನು ಚಾಸಾ-8 ರವರು ಕೇಳಿದ್ದು, ನಾನು ಕೇಳಿರುವುದಿಲ್ಲ. ಆ ಸಂಬಂಧ ನನಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಅಮಾನತ್ತು ಪಡಿಸಿಕೊಳ್ಳಲಾದ ಹಣವು ತಮಗೆ ಸೇರಿದ್ದು ಎಂದು ಕೆನರಾ ಬ್ಯಾಂಕ್ ನವರು ಇಂಡೆಂಟ್ ಅನ್ನು ನೀಡಿದ್ದು, ಅದರ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ತನಿಖೆ ಕಾಲದಲ್ಲಿ ಹಣದ ಬಗ್ಗೆ ಸೂಕ್ತ ಮಾಹಿತಿ ನೀಡದೇ ಇದ್ದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ. ಅಮಾನತ್ತು ಪಡಿಸಿಕೊಳ್ಳಲಾದ ಹಣವು ಕೆನರಾ ಬ್ಯಾಂಕಿಗೆ ಸೇರಿದ್ದಾಗಿರುತ್ತದೆ ಎಂಬುದರ ಬಗ್ಗೆ ಮನವರಿಕೆ ಮಾಡಿಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಆ ಬಗ್ಗೆ ನಮಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಅಮಾನತ್ತು ಪಡಿಸಿಕೊಳ್ಳಲಾದ ಹಣವು ಯಾವುದಾದರೂ ರಾಜಕೀಯ ಪಕ್ಷಕ್ಕೆ ಸೇರಿತ್ತು

ಎಂಬುದರ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ. ಸಾಕ್ಷಿ ಮುಂದುವರೆದು ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿ ಇದ್ದುದ್ದರಿಂದ, ನೀತಿ ಸಂಹಿತೆಯ ಉಲ್ಲಂಘನೆ ಆದ್ದರಿಂದ ಈ ಪ್ರಕರಣವನ್ನು ದಾಖಲು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಬುಲೆರೋ ವಾಹನದಲ್ಲಿ ಒಬ್ಬ ಗನ್ ಮ್ಯಾನ್ ಮತ್ತು ಸಿ.ಸಿ ಟಿವಿ ಇದ್ದ ಬಗ್ಗೆ ನನ್ನ ತನಿಖೆ ಸಮಯದಲ್ಲಿ ತಿಳಿದು ಬಂದಿರುವುದಿಲ್ಲ. ಬುಲೆರೋ ವಾಹನವನ್ನು ನಂಜಗೂಡಿನ ಗ್ರಾಮಾಂತರ ಪೊಲೀಸ್ ಠಾಣೆಯ ಮುಂಭಾಗ ವಶಕ್ಕೆ ಪಡೆದ ಸಮಯ ಆರೋಪಿಗಳು ವಾಹನದಲ್ಲಿ ಇದ್ದ ಹಣವು ಕೆನರಾ ಬ್ಯಾಂಕಿಗೆ ಸೇರಿದ್ದಾಗಿದ್ದು ಅದನ್ನು ಎ.ಟಿ.ಎಂಗೆ ಹಾಕಲು ತೆಗೆದುಕೊಂಡು ಹೋಗುತ್ತಿರುವುದಾಗಿ ಇಂಡೆಂಟ್ ಕಾಫಿಯನ್ನು ನೀಡಿದ್ದು, ಅದನ್ನು ಪರಿಶೀಲನೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಒಂದು ವೇಳೆ ಆ ರೀತಿ ದಾಖಲೆಯನ್ನು ಹಾಜರುಪಡಿಸಿದ್ದ ಪಕ್ಷದಲ್ಲಿ ಚಾಸಾ-1 ರವರು ಪ್ರಕರಣವನ್ನು ದಾಖಲು ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನೇ ಹಾಜರುಪಡಿಸಿರುವ ದೋಷಾರೋಪಣಾ ಪಟ್ಟಿಯಲ್ಲಿ ಕೆನರಾ ಬ್ಯಾಂಕ್ ನವರು ನೀಡಿರುವ ಇಂಡೆಂಟ್ ಅನ್ನು ಸಹ ಲಗತ್ತಿಸಿದ್ದು ಅದರ ಸಂಬಂಧ ನಿಮಗೆ ತಿಳುವಳಿಕೆ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಪ್ರಕರಣವನ್ನು ದಾಖಲಿಸಿದ ನಂತರ ಇಂಡೆಂಟ್ ಕಾಫಿಯನ್ನು ನೀಡಿರುವುದರಿಂದ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ಘಟನಾ ದಿನಾಂಕದಂದು ನಮ್ಮ ವರಿಷ್ಠಾಧಿಕಾರಿಯವರು ಸಹ ಘಟನಾ ಸ್ಥಳದಲ್ಲಿ ಇದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಘಟನಾ ದಿನಾಂಕದಂದು ನಮ್ಮ ವರಿಷ್ಠಾಧಿಕಾರಿಯವರು ಘಟನಾ ಸ್ಥಳದಲ್ಲಿ ಹಾಜರಿದ್ದು ಆ ಸಮಯ ಆರೋಪಿಗಳು ಅಮಾನತ್ತು ಪಡಿಸಿಕೊಳ್ಳಲಾದ ಹಣವು ಕೆನರಾ ಬ್ಯಾಂಕ್‌ಗೆ ಸಂಬಂಧಿಸಿದ್ದು ಎಂದು ತೋರಿಸಲು ಇಂಡೆಂಟ್ ಕಾಫಿಯನ್ನು ನೀಡಿದ್ದರೂ ಸಹ ಒಂದು ರಾಜಕೀಯ ಪಕ್ಷಕ್ಕೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿಗಳು ವಿರುದ್ಧ ಈ ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ರಾಜಕೀಯ ಪಕ್ಷದ ವ್ಯಕ್ತಿಗಳನ್ನು ಓಲೈಸಿಕೊಳ್ಳುವ ದುರುದ್ದೇಶದಿಂದ ಸರಿಯಾಗಿ ತನಿಖೆ ಮಾಡದೇ ನನ್ನ

ಇಚ್ಛಾನುಸಾರ ಆರೋಪಿಗಳ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ನಾವು ಅವರಿಗೆ ಮಾನಸಿಕ ಹಿಂಸೆ ನೀಡಿರುತ್ತೇವೆ ಎಂದರೆ ಸರಿಯಲ್ಲ. ಜಪ್ತುಪಡಿಸಿಕೊಳ್ಳಲಾದ ಹಣವು ಎ.ಟಿ.ಎಂ ಮುಖಾಂತರ ಸಾರ್ವಜನಿಕರಿಗೆ ತಲುಪಬೇಕಾದ ಹಣವೆಂದು ತಿಳಿಸಿದ್ದರೂ ಸಹ ವಿನಾಕಾರಣ ಆರೋಪಿಗಳ ವಿರುದ್ಧ ಈ ಪ್ರಕರಣವನ್ನು ದಾಖಲಿಸಿ ಸಾರ್ವಜನಿಕರಿಗೆ ತೊಂದರೆಯನ್ನು ಉಂಟು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**